1.20 ಲಕ್ಷವಾಗುತ್ತದೆ. ಈ ಯೋಜನೆಗಳನ್ನು ಮುಗಿಸಲು ಇನ್ನು ಸುಮಾರು ರೂ. 5.00 ಲಕ್ಷ ಹಣ ಬೇಕಾಗಿರುತ್ತದೆ. ಈ ಹಣವನ್ನು ಜಿಲ್ಲಾಧಿಕಾರಿಯವರು ಬಿಡುಗಡೆ ಮಾಡಬೇಕಾಗುತ್ತದೆ. ಮಿಕ್ಕ ಹಣವನ್ನು ಬಿಡುಗಡೆ ಮಾಡಲು ಯೋಜನಾ ಇಲಾಖೆಯು ಕ್ರಮ ತೆಗೆದುಕೊಳ್ಳಬೇಕಾಗಿದೆ.

೬. ಬೆಂಗಳೂರು-ಕುಮಟಾಕ್ಕೆ ಎರಡು ಸುಖಾಸೀನ ಬಸ್‌ಗಳನ್ನು ಓಡಿಸುವುದು.

ಶ್ರೀ ಆರ್.ಎನ್. ನಾಯ್ಕ್ (ಭಟ್ಕಳ):- ಮಾನ್ಯ ಅಧ್ಯಕ್ಷರೆ, ಬೆಂಗಳೂರು-ಕುಮಟಾಕ್ಕೆ ಸುಖಾಸೀನ ಬಸ್ ಓಡಿಸುತ್ತಿದ್ದು ಒಂದು ಬಸ್ ಸಾಧಾರಣ ಸ್ಥಿತಿಯಲ್ಲಿದೆ. ಇನ್ನೊಂದು ಬಸ್ ಸಂಪೂರ್ಣ ಕೆಟ್ಟಿದ್ದು ಮಳೆಗಾಲದಲ್ಲಿ ಸೋರುವುದಲ್ಲದೆ ವಿಪರೀತ ಕೆಟ್ಟ ಶಬ್ದ ಬರುತ್ತಿದ್ದು ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ತಿಳಿಸಿದರೂ ಪ್ರಯೋಜನವಾಗಿಲ್ಲ. ದಯಮಾಡಿ ನಾಳೆಯಿಂದಲೇ ಎರಡು ಒಳ್ಳೆ ಬಸ್ಸುಗಳನ್ನು ಬೆಂಗಳೂರು-ಕುಮಟಾಕ್ಕೆ ಓಡಿಸುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಸಚಿವರು) : The Super Deluxe services between Bangalore and Kumta are operated by IInd Depot of Bangalore Division, Keeping in view the long distance, efforts have been made to fix vehicles for this route and buses bearing Nos. KA 01 F 5010 and KA 01 F 5420 have been fixed for this route. During the month of February and till date, only on two occasions different vehicles were operated due to exigencies. On 22-2-1993, KA 01 F 5357 and on 6-3-1993 MEF 1893 were operated on this route.

The details of age and progressive Kms covered by the fixed vehicles are as under :

Vehicle No.	Date of Registration	Progressive KMs.
1. KA 01 F 5010	26.7.1990	5,09,622
2. KA 01 F 5420	14.7.1992	1,17,768

Super Deluxe vehicles of KSRTC are normally replaced when they perform beyond 3,50,000 KMs from the date of commissioning depending upon their body condition. However, due to paucity of new vehicles it is not always possibly to replace vehicles as required.

Bangalore Division operates 98 Super Deluxe schedules with 108 vehicles and as many as 58 vehicles have become due for replacement and

as such Bangalore Division will be supplied with vehicles on priority basis. Vehicle No. KA 01 F 5010 fixed for Kumta-Bangalore service which has performed high KMs will be replaced before end of March, 93

6. ಬೆಂಗಳೂರಿನ ನ್ಯಾಷನಲ್ ಕೊ-ಆಪರೇಟೀವ್ ಬ್ಯಾಂಕ್‌ನಲ್ಲಿ ಹುದ್ದೆಗಳನ್ನು ತುಂಬುವಾಗ ರೋಸ್ಟರ್ ಪಾಲನೆ ಮಾಡದಿರುವುದು.

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಒಂದು ಸಹಕಾರಿ ಬ್ಯಾಂಕ್ ಆಗಿದ್ದು, ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಅಡಿಯಲ್ಲಿ ಬರುತ್ತದೆ. ಈ ಬ್ಯಾಂಕ್‌ನಲ್ಲಿ ಒಟ್ಟು 121 ನೌಕರರು (ಅಧಿಕಾರಿಗಳನ್ನು ಸೇರಿಸಿ) ಇದ್ದು, ಇವರಲ್ಲಿ ಕೇವಲ ಎರಡು ನೌಕರರುಗಳು ಮಾತ್ರ ಪರಿಶಿಷ್ಟ ಜಾತಿ ವರ್ಗಗಳಿಗೆ ಸೇರಿದವರಾಗಿದ್ದಾರೆ. ಇಲ್ಲಿ ಅರ್ಜಿಗಳನ್ನು ಕರೆಯದೆ, ಎಲ್ಲಾ ಹುದ್ದೆಗಳನ್ನೂ ತುಂಬಿಕೊಳ್ಳಲಾಗಿದೆ. ಸರ್ಕಾರದಿಂದ ಧನಸಹಾಯ ಪಡೆಯುತ್ತಿಲ್ಲವೆಂಬ ಒಂದು ಕಾರಣಕ್ಕಾಗಿ ಈ ಬ್ಯಾಂಕಿನಲ್ಲಿ ರೋಸ್ಟರ್ ಪಾಲನೆ ಮಾಡುತ್ತಿಲ್ಲ. ಈ ರೀತಿ ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳು ರೋಸ್ಟರ್ ಪದ್ಧತಿ ಪಾಲನೆ ಮಾಡದಿದ್ದರೆ, ಪರಿಶಿಷ್ಟ ಜಾತಿ-ವರ್ಗದವರಿಗೆ ಯಾವುದೇ ಹುದ್ದೆಗಳು ದೊರಕುವುದಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಸರ್ಕಾರದ ರೋಸ್ಟರ್ ಪಾಲನೆಯನ್ನು ಮೇಲ್ಕಂಡ ಬ್ಯಾಂಕಿನಲ್ಲಿ ಮಾಡಲು ಸೂಚನೆ ನೀಡುವುದು ಅತಿ ಅಗತ್ಯ. ಈ ಬಗ್ಗೆ ಮಾನ್ಯ ಸಹಕಾರಿ ಸಚಿವರು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ (ಲಿ) ಬೆಂಗಳೂರು ಇದು 1975ರ ನಂತರ ನೊಂದಣಿ ಆಗಿರುತ್ತದೆ. ಈ ಬ್ಯಾಂಕು ಮಿಾಸಲಾತಿ ಪದ್ಧತಿಯನ್ನು ಅನುಸರಿಸಿರುವುದಿಲ್ಲ.

ಹಾಲಿಯಾಗಿ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 121 ಸಿಬ್ಬಂದಿಗಳಲ್ಲಿ ಇಬ್ಬರು ನೌಕರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ವಿವರಣೆಯು ಈ ಕೆಳಕಂಡಂತೆ ಇರುತ್ತದೆ :

ಕ್ರ. ಸಂ.	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ	ಪರಿಶಿಷ್ಟ ಜಾತಿ : ಪಂಗಡ
1.	ಮುಖ್ಯ ಕಾರ್ಯನಿರ್ವಹಣಾಧಿಕಾರಿ	1	-
2.	ಮ್ಯಾನೇಜರ್	1	-
3.	ಸಹಾಯಕ ಮ್ಯಾನೋಜರ್	1	-
4.	ಲೆಕ್ಕಾಧಿಕಾರಿ	2	-
5.	ಸಹಾಯಕ ಲೆಕ್ಕಾಧಿಕಾರಿ	3	-
6.	ಹಿರಿಯ ಸಹಾಯಕರು	5	-
7.	ಕಿರಿಯ ಸಹಾಯಕರು	90	2
8.	ಅಟೆಂಡರ್:ವಾಚ್‌ಮನ್:ಡ್ರೈವರ್	18	-